**OS: 78/2021**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 29.11.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ</u>**

ದಿಃ 15-11-2018 ರಂದು ನಮ್ಮ ದಲ್ಲಾಳಿ ಅಂಗಡಿಯಿಂದ ಪ್ರತಿವಾದಿಗೆ ರೂ. 10 ಸಾವಿರ ಹಣವನ್ನು ನೀಡಿದ್ದೆ ಎಂಬುದಾಗಿ ಹೇಳಿದ್ದು ಈ ಸಂಬಂಧವಾಗಿ ನಿ.ಪಿ 2 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದರಲ್ಲಿ ರೂ. 10 ಸಾವಿರಗಳನ್ನು ಪ್ರತಿವಾದಿಯ ತಮ್ಮ ಶಿವಕುಮಾರ್ ರವರು ಸ್ವೀಕರಿಸಿರುವುದರ ಬಗ್ಗೆ ನಮೂದು ಆಗಿದ್ದು ಮತ್ತು ಅವರ ಸಹಿ ಸಹ ಇರುವುದಾಗಿ ಸಾಕ್ಷಿ ಒಪ್ಪಿರುತ್ತಾರೆ. ಸದರಿ ಭಾಗವನ್ನು ನಿ.ಪಿ 2-ಎ ಎಂದು ಗುರುತಿಸಲಾಯಿತು.

ದಿಃ 11.06.2018 ರಂದು ರೂ. 1,80,000/- ಮತ್ತು ದಿಃ 18.06.2018 ರಂದು ರೂ. 1,50,000/- ಗಳನ್ನು ಚೆಕ್ ಮೂಲ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂಬುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಸಂಬಂಧವಾಗಿ ನಾನು ನನ್ನ ಬ್ಯಾಂಕ್ ಅಕೌಂಟ್ ಸ್ಟೇಟ್ಮೆಂಟ್ ನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಸಮಕ್ಷಮ ಪ್ರತಿವಾದಿಗೆ ಹಣ ಕೊಟ್ಟಿಲ್ಲ ಎಂದರೆ ಸರಿ. ನಿ.ಪಿ 1 ಮತ್ತು 2 ರ ದಾಖಲೆಗಳು ನಮ್ಮ ದಲ್ಲಾಳಿ ಏಜೆಂಟ್ ಅಂಗಡಿಯಲ್ಲಿ ದಿನನಿತ್ಯದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ಮತ್ತು ನಮ್ಮ ಲೆಕ್ಕದ ಗುಮಾಸ್ತರು ದಾಖಲು ಮಾಡುತ್ತೇವೆ ಎಂದರೆ ಸರಿ. ನಮ್ಮ ವ್ಯವಹಾರವನ್ನು ನಾವು ಆಡಿಟ್ ಮಾಡಿಸಿರುವುದಿಲ್ಲ ಹಾಗಾಗಿ ನಿ.ಪಿ 1 ಮತ್ತು 2 ಕ್ಕೆ ಅವರು ಪರಿಶೀಲಿಸಿದ ಬಗ್ಗೆ ಯಾವುದೇ ಸೀಲ್, ಸಹಿ ಇರುವುದಿಲ್ಲ. ನಮ್ಮ ರಿಜಿಸ್ಟರ್ ನಲ್ಲಿ ಬರೆದಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ವರ್ಷಕ್ಕೆ ಒಂದರಿಂದ ಎರಡು ಕೋಟಿ ವ್ಯವಹಾರ ಆಗುತ್ತದೆ ಎಂದರೆ ಸರಿ.

ರೈತರು ಬೆಳೆದ ದವಸ ಧಾನ್ಯಗಳನ್ನು ನಮ್ಮ ಮಂಡಿಗೆ ಹಾಕುತ್ತಾರೆ ನಾವು ಅದನ್ನು ಟೆಂಡರ್ ಮೂಲಕ ಮಾರಾಟ ಮಾಡಿ ದಲ್ಲಾಳಿ ಕಮಿಷನ್ ಪಡೆಯುತ್ತೇವೆ. ಸದರಿ ಉದ್ದೇಶಕ್ಕೆ ಮಾತ್ರ ದಲ್ಲಾಳಿ ಲೈಸೆನ್ಸ್ ನ್ನು ಪಡೆದಿರುತ್ತೇನೆ ಎಂದರೆ ಸರಿ. ಆದರೆ ನಾನು ಬಡ್ಡಿ ವ್ಯವಹಾರಕ್ಕೆ ಹಣ ನೀಡುತ್ತೇನೆ ಎಂದರೆ ಸರಿ. ನಮಗೆ ನೀಡಿರುವ ಲೈಸೆನ್ಸ್ ನಲ್ಲಿ ಬಡ್ಡಿ ವ್ಯವಹಾರದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಬಡ್ಡಿ ವ್ಯವಹಾರ ಮಾಡಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಲೈಸೆನ್ಸ್ ಪಡೆಯಬೇಕು ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ

ಸರಿಯಲ್ಲ. ಆದರೂ ಸಹ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2021 ರಲ್ಲಿ ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿರುತ್ತದೆ. ಹಣಕಾಸಿನ ವ್ಯವಹಾರವಾದ ದಿನಾಂಕದಿಂದ 3 ವರ್ಷದ ಒಳಗೆ ಈ ದಾವೆ ಸಲ್ಲಿಸಬೇಕಾಗಿತ್ತು ಎಂದರೆ ಸರಿ. ನಾನು ನಿಗದಿತ ಅವಧಿಯಲ್ಲಿ ಈ ದಾವೆ ಸಲ್ಲಿಸಿರುತ್ತೇನೆ.

ಪ್ರತಿವಾದಿ ನನ್ನ ತಂದೆಯ ಕಾಲದಿಂದ ನಮಗೆ ಪರಿಚಯಸ್ಥರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ಕಾಲದಿಂದಲೂ ಅವರು ನಮ್ಮ ಅಂಗಡಿಗೆ ಬರುವುದು, ಹೋಗುವುದು ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ ನಮ್ಮ ಅಂಗಡಿಗೆ ಒಳ್ಳೆಯ ಗ್ರಾಹಕ ಎಂದರೆ ಸರಿ. ಪ್ರತಿವಾದಿಯ ಮೂಲಕ ಬೇರೆಯವರು ಸಹ ನಮ್ಮ ಅಂಗಡಿಯಲ್ಲಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಕಾಲವಾದ ನಂತರ ನನ್ನ ಮತ್ತು ಪ್ರತಿವಾದಿಯ ನಡುವೆ ತಕರಾರು ಆಗಿದೆ ಎಂದರೆ ಸರಿಯಲ್ಲ, ಇತ್ತೀಚೆಗೆ ವಾಯಿದೆ ಅವಧಿ ಮುಗಿದ ನಂತರ ತಕರಾರು ಉಂಟಾಗಿರುತ್ತದೆ. ಪ್ರತಿವಾದಿ ನಮ್ಮ ಮಂಡಿಗೆ ದವಸ ಧಾನ್ಯವನ್ನು ಕೊಟ್ಟ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ. ಹಳೆಯ ವ್ಯವಹಾರಗಳು ನನ್ನ ಮತ್ತು ಪ್ರತಿವಾದಿಯ ನಡುವೆ ಮುಗಿದಿದ್ದು ಹೊಸ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಈ ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿ ಅನಕ್ಷರಸ್ತನಾದ ಕಾರಣ ಆತ ನನ್ನಿಂದ ಸಾಲ ಪಡೆದಿದ್ದಾನೆಂದು ಸುಳ್ಳು ದಾಖಲೆ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆತ ನಮ್ಮ ಮಂಡಿಗೆ ನೀಡಿದ ದವಸ ಧಾನ್ಯದ ಬಗ್ಗೆ ದಾಖಲೆ ಇಟ್ಟಿಲ್ಲ ಎಂದರೆ ನಮ್ಮ ಅಂಗಡಿಗೆ ಯಾವುದೇ ದವಸ ಧಾನ್ಯಗಳನ್ನು ಕೊಟ್ಟಿಲ್ಲ ಹಾಗಾಗಿ ದಾಖಲೆ ಇಟ್ಟಿಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**